ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Tuesday, 11th July 1972/Ashadha 20, 1894 (Saka Era).

The House met in the Assembly Chamber, Vidhana Soudha, at Twelve of the Clock.

MADAM SPEAKER (SMT. K. S. NAGARATHNAMMA) in the Chair.

STARRED QUESTIONS

(to which oral answers were given)

Distribution of Sugar in Rural Areas

30. **Sri H. S. SIDDAPPA** (Arsikere).--

Will the Minister of State for Food and Civil Supplies be pleased to state :—

(*a*) the arrangements made for the distribution of sugar in rural areas ;

(*b*) the rank of the officers authorised for arranging distribution of sugar at taluk level ?

Smt. E. E. VAZ (Minister of state for Food and Civil Supplies).—

(*a*) The Deputy Commissioners have been requested to arrange for the distribution of sugar allotted by the Government of India under the ' voluntary distribution of sugar ' in rural areas through Co-operative Societies, Fair Price Shops and Village Panchayaths.

(*b*) Tahsildar is responsible for proper distribution of sugar in his taluk.

ಶ್ರೀ ಎಚ್. ಎಸ್. ಸಿದ್ದಪ್ಪ.—ನ್ಯಾಮಿ ತಾವು ಉತ್ತರದಲ್ಲಿ ಭಾರತ ಸರ್ಕಾರದಿಂದ ಬಂದ ಸಕ್ಕರೆಯನ್ನು ನ್ಯಾಯ ಬೆಲೆಯಲ್ಲಿ ಹಂಚುವುದಕ್ಕೆ ಜಿಲ್ಲಾಧಿಕಾರಿಗಳನ್ನು ಕೋರಲಾಗಿದೆ ಎಂದು ಹೇಳಿದ್ದೀರಿ. ಗ್ರಾಮಾಂತರ ಪ್ರದೇಶದಲ್ಲಿ ಸಕ್ಕರೆ ಹಂಚಿಕೆ ಯಾಗುತ್ತಿದೆಯೇ ಎನ್ನುವುದನ್ನು ಪರಿಶೀಲನೆ ಮಾಡಿದ್ದೀರಾ ?

† ಶ್ರೀಮತಿ ಇ. ಇ. ವಾಜ್.—ಎಲ್ಲಿ ಸರಿಯಾಗಿ ಹಂಚಿಕೆಯಾಗುತ್ತಿಲ್ಲ ಎಂದು ನಮ್ಮ ಗಮನಕ್ಕೆ ಬಂದಿಲ್ಲ. ಆದಷ್ಟು ಪ್ರಯತ್ನಪಟ್ಟು ಸಕ್ಕರೆಯನ್ನು ಫೇರ್‌ಪ್ರೈಸ್ ಡಿಪೋಗಳಲ್ಲಿ ಕೊಡುತ್ತಿದ್ದೇವೆ. ಸಕ್ಕರೆ ಎಲ್ಲಿ ಕನ್‌ಸ್ಯೂಮರ್ಸ್‌ಗೆ ಹೋಗುತ್ತಾ ಇಲ್ಲ ಎನ್ನುವುದನ್ನು ಅಧಿಕಾರಿಗಳು ನೋಡುತ್ತಾರೆ. ಎಲ್ಲಿ ಹೋಗುತ್ತಾ ಇಲ್ಲ ಅಲ್ಲಿ ಸಂಬಂಧಪಟ್ಟವರಮೇಲೆ ಕಾನೂನು ರೀತ್ಯ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಪುರಸಭೆಗಳ ಅವರಣದಲ್ಲಿ ಪುರಸಭೆಗಳ ಮುಖಾಂತರ ಸಕ್ಕರೆ ರೇಷನ್ ಕಾರ್ಡ್ ಹಂಚಿಕೆಮಾಡಿ ಸಕ್ಕರೆ ಮಾರಾಟ ಆಗುತ್ತಾ ಇರುವುದು ತಮ್ಮಗಮನಕ್ಕೆ ಬಂದಿದೆಯೇ? ಬರದಿದ್ದರೆ ಮಾಹಿತಿ ತರಿಸಿ ಸೂಕ್ತ ಕಾರ್ಯಕ್ರಮ ಕೈ ಗೊಳ್ಳುತ್ತಿರಾ?

ಶ್ರೀಮತಿ ಇ. ಇ. ವಾಜ್.—ನಮ್ಮ ಗಮನಕ್ಕೆ ಬಂದಿಲ್ಲ. ಬಂದರೆ ಖಂಡಿತವಾಗಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ. ಎಂ. ಮಂಜುನಾಥ್.— ನ್ಯಾಯ ಬೆಲೆ ಅಂಗಡಿಗಳಿಗೆ ಸಕ್ಕರೆ ಹಂಚುತ್ತೇವೆ ಎಂದು ಹೇಳಿದಿರಿ. ನಮ್ಮ ತಾಲ್ಲೂಕಿನಲ್ಲಿ ತಹಸಿಲ್ದಾರರು ನ್ಯಾಯ ಬೆಲೆಗೆ ಸಕ್ಕರೆ ಹಂಚುವುದಕ್ಕೆ ಸಕ್ಕರೆ ಕೊಡುತ್ತಾ ಇಲ್ಲ. ಸಹಕಾರಿ ಸಂಘಗಳಿಗೆ ಸಕ್ಕರೆ ಕೊಡುತ್ತಾರೆ. ಅವರು ಪಟ್ಟಣದಲ್ಲಿ ಮೂಟೆಗೆ 50–60 ರೂಪಾಯಿ ಲಾಭಕ್ಕೆ ಮಾರಿ ಹಳ್ಳಿಗಳಲ್ಲಿ ಹಂಚುತ್ತಾ ಇಲ್ಲ. ಅದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀಮತಿ ಇ. ಇ. ವಾಜ್.—ಅಂಥಾದ್ದು ಯಾವುದೂ ಸರ್ಕಾರದ ಗಮನಕ್ಕೆ ಬಂದಿಲ್ಲ. ಮಾನ್ಯ ಸದಸ್ಯರು ಗಮನಕ್ಕೆ ತಂದರೆ ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

Sri A. G. KODGI.— As sugar is not distributed properly, will the Government think of appointing a special committee consisting of non-officials with regard to distribution of sugar?

ಶ್ರೀಮತಿ ಇ. ಇ. ವಾಜ್.—ಸ್ಪೆಷಲ್ ಕಮಿಟಿ ಮಾಡುವ ಯೋಚನೆ ಇಲ್ಲ. ಮಾನ್ಯ ಸದಸ್ಯರು ವಿಜಿಲೆಂಟ್ ಆಗಿದ್ದು, ನೋಡಿ ಎಲ್ಲಿ ಆದರೂ ಹೆಚ್ಚು ಕಡಿಮೆ ಆದರೆ ಅದನ್ನು ಗಮನಕ್ಕೆ ತಂದರೆ ಬಹಳ ಉಪಕಾರವಾಗುತ್ತದೆ.

ಶ್ರೀ ಎಸ್. ಎಂ. ಚಂದ್ರಶೇಖರ್.—ಹೊನ್ನಾಳಿ ತಾಲ್ಲೂಕು ನ್ಯಾಮತಿಯಲ್ಲಿ ಸೊಸೈಟಿ ಯವರು ಮೂಟೆಗಟ್ಟಲೆ ಸಕ್ಕರೆ ತೆಗೆದುಕೊಂಡು ಬಡ ಜನಕ್ಕೆ ಹೆಚ್ಚಿನ ಬ್ಲಾಕ್ ಮಾರ್ಕೆಟ್ ಮಾಡುತ್ತಾ ಇದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀಮತಿ ಇ. ಇ. ವಾಜ್.—ನಮ್ಮ ಗಮನಕ್ಕೆ ಬಂದಿಲ್ಲ. ನಮ್ಮ ಗಮನಕ್ಕೆ ತಂದರೆ ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ವಿ. ಕಕ್ಕೇರಾಯ.—ಮಂಗಳೂರಿನಲ್ಲಿ ಬೆರ್ಲ್ ಏರಿಯಾದಲ್ಲಿ ಅಕ್ಕಿ ವಿತರಣೆ ಮಾಡುವವರು ಸಕ್ಕರೆ ವಿತರಣೆ ಮಾಡುತ್ತಾರೆ. ಅಲ್ಲಿ ಬ್ಲಾಕ್‌ಮಾರ್ಕೆಟ್ ಆಗುತ್ತಾ ಇರುತ್ತದೆ, ಅದನ್ನು ತಮ್ಮ ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀಮತಿ ಇ. ಇ. ವಾಜ್.—ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಸಕ್ಕರೆ ಹಂಚುವಾಗ ಪ್ರೈವೇಟ್ ಡಿಪೋಗಳಿಗೆ ಕೊಡ ಕೂಡದು. ಎಲ್ಲೆಲ್ಲಿ ಸಹಕಾರಿ ಸಂಘಗಳು ಇವೆಯೋ ಅಲ್ಲಿ ಕೊಡಬೇಕು. ಪ್ರೈವೇಟ್ ಡಿಪೋಗಳಿಗೆ ಕೊಟ್ಟರೆ ಬ್ಲಾಕ್ ಮಾಡುತ್ತಾರೆ. ಇನ್ನು ಮೇಲಾದರೂ ಆ ರೀತಿ ಕೊಡುವುದನ್ನು ನಿಲ್ಲಿಸಿ ಸೊಸೈಟಿ ಮುಖಾಂತರ ಕೊಟ್ಟು ಸರಿಯಾಗಿ ವಿತರಣೆಯಾಗುವಂತೆ ನೋಡಿಕೊಳ್ಳುವುದಕ್ಕೆ ಆಶ್ವಾಸನೆ ಕೊಡುತ್ತೀರಾ?

ಶ್ರೀಮತಿ ಇ. ಇ. ವಾಜ್.—ಸೊಸೈಟಿ ಮೂಲಕ ಕೊಡಬೇಕು ಎಂದು ಸರ್ಕಾರದ ನಿರ್ಧಾರ ಇದೆ. ಎಲ್ಲಿ ಸೊಸೈಟಿಗಳು ಇವೆ ಅವರಿಗೆ ಕೊಡಬೇಕು. ಎಲ್ಲಿ ಸೊಸೈಟಿಗಳು ಇಲ್ಲ ಅಥವಾ ಎಲ್ಲಿ ಸೊಸೈಟಿಗಳು ಮುಂದೆ ಬರುವುದಿಲ್ಲ, ಆ ನಂದರ್ಭಗಳಲ್ಲಿ ಮಾತ್ರ ಇಂಡಿವಿಜ್ಯುಯಲ್ ಆಗಿ ಬೇರೆ ಯವರಿಗೆ ಕೊಡುತ್ತಿದ್ದೇವೆ. ಎಲ್ಲಾದರೂ ತಪ್ಪಿತಸ್ಥರು ಇದ್ದರೆ ಅವರಿಗೆ ಏನು ಶಿಕ್ಷೆ ಕೊಡಬೇಕು ಅದನ್ನು ಕೊಡುತ್ತೇವೆ.

---

† Indicates that the remarks or speeches have not been revised by the member concerned.

ಶ್ರೀ ಎಚ್. ಎಸ್. ಸಿದ್ದಪ್ಪ.—ಗ್ರಾಮಪಂಚಾಯತಿಗಳ ಮೂಲಕ ಹಂಚುವ ವ್ಯವಸ್ಥೆ ಮಾಡಿದ್ದೇವೆಂದು ಹೇಳಿದ್ದೀರಿ. ಅರಸೀಕೆರೆ ತಾಲ್ಲೂಕಿನಲ್ಲಿ ಅನೇಕ ಸಹಕಾರ ಸಂಘಗಳು ಕೆಲಸ ಮಾಡುತ್ತಾ ಇಲ್ಲ. ಅಲ್ಲಿ ಮಾರ್ಕೆಟಿಂಗ್ ಸೊಸೈಟಿಯವರು ನೇರವಾಗಿ ಬ್ಲಾಕ್‌ಮಾರ್ಕೆಟ್ ಮಾಡುತ್ತಾರೆ. ಅಲ್ಲಿ ಕಡ್ಡಾಯವಾಗಿ ಗ್ರಾಮಪಂಚಾಯತಿಗಳಿಗೆ ಕೊಟ್ಟು ಅವುಗಳ ಮುಖಾಂತರ ನಕ್ಕರೆ ಗ್ರಾಮಾಂತರ ಪ್ರದೇಶಗಳಿಗೆ ಹೊರಡುವ ಹಾಗೆ ಮಾಡುತ್ತೀರಾ ?

ಶ್ರೀಮತಿ ಇ. ಇ. ವಾಜ್.—ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲಿಸಲಾಗುವುದು.

Construction of Tank near Rangayyana Durga

179. **Sri PATEL PAPA NAIK** (Molakalmuru).—

Will the Minister for Public Works and Electricity be pleased to state:—

(*a*) whether representations have been received by the Government for construction of a tank near Rangayyana Durga in Molakalmuru Taluk ;

(*b*) whether survey work, plans and estimates have been prepared in this behalf ;

(*c*) if so, whether Government has accorded sanction to them ;

(*d*) if so, when the construction work of this tank would be taken up ?

Sri H. M. CHANNABASAPPA (Minister for Public Works and Electricity).—

(*a*) Yes.

(*b*) Survey work has been completed and plans and estimates are not ready.

(*c*) and (*d*) Do not arise in view of reply to clause (*b*).

ಶ್ರೀ ಪಟೇಲ್ ಪಾಪನಾಯಕ್.—ಸಮೀಕ್ಷೆ ಕಾರ್ಯ ಮುಗಿದಿದೆ ಎಂದು ಹೇಳಿದ್ದೀರಿ. ಅಲ್ಲಿ ಕೂಡಲೇ ಕೆರೆ ಕಟ್ಟಿ ಅಲ್ಲಿಂದ ಜನರಿಗೆ ಹೆಚ್ಚಿನ ಉಪಯೋಗ ಆಗುವ ಕಾರ್ಯ ಮಾಡಿ ಕೊಡುತ್ತೀರಾ ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಕ್ಕೋಸ್ಕರವಾಗಿಯೇ ಸರ್ವೆ ಮಾಡಿ ಅಂದಾಜು ತಯಾರಾಗಿದೆ. ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಪಟೇಲ್ ಪಾಪನಾಯಕ್.—ಅದರಿಂದ ಎಷ್ಟು ಎಕರೆ ನೀರಾವರಿ ಆಗಬಹುದು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದರಿಂದ 7 ಸಾವಿರ ಎಕರೆ ಸೆಮಿ ಡ್ರೈ ಕ್ರಾಪಿಗೆ ನೀರು ಒದಗುತ್ತದೆ. ಜೊತೆಗೆ ಅಲ್ಲಿ ಇರತಕ್ಕ 3750 ಎಕರೆಗೆ ಭದ್ರತೆಯನ್ನು ಕೊಡುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಇಲ್ಲಿ ಸಮೀಕ್ಷೆ ಕಾರ್ಯ ಮುಗಿದಿದೆ, ನಕ್ಷೆ ಮತ್ತು ಅಂದಾಜುಗಳು ತಯಾರಾಗಿಲ್ಲ ಎಂದು ಹೇಳಿದ್ದೀರಿ. ಈ ಕೆರೆಯನ್ನು ಕಟ್ಟುವುದಕ್ಕೆ ಮನವಿ ಯಾವಾಗ ಬಂತು, ಸಮೀಕ್ಷೆ ಯಾವಾಗ ಮಾಡಿದ್ದೀರಿ ಮತ್ತು ಯಾವಾಗ ಇದನ್ನು ಪೂರೈಸುವುದಕ್ಕೆ ಯೋಜನೆ ಇಟ್ಟುಕೊಂಡಿದ್ದೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮನವಿ ಬಹಳ ಕಾಲದ ಹಿಂದೆ ಬಂತು. ಹತ್ತಾರು ವರ್ಷ ಗಳಿಂದ ಈ ಕೆರೆ ಕಟ್ಟಬೇಕೆಂದು ಕೇಳುತ್ತಿದ್ದರು. 1966ನೇ ಇಸವಿಯಲ್ಲಿ ಪ್ರಥಮಭಾರಿ ಅಂದಾಜು